# ಕುವೆಂಪು ವಿಶ್ವವಿದ್ಯಾಲಯ

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ.

ಜ್ಞಾನಸಹ್ಯಾದ್ರಿ, ಶಂಕರಘಟ್ಟ–577415, ಶಿವಮೊಗ್ಗ, ಕರ್ನಾಟಕ.

Phone No: 08282-256166, mob: 7022254993ಇ–ಮೇಲ್: regexamku@gmail.com, ವೆಬ್‌ಸೈಟ್: www.kuvempu.ac.in


ಸಂಖ್ಯೆ: ಕುವಿ/ಪವಿ/ಪಿಸಿ/ 5513 /2024–25 ದಿನಾಂಕ: 17–02–2025

## ಪ್ರಕಟಣೆ

**ವಿಷಯ:** ಮಾರ್ಚ್/ಏಪ್ರಿಲ್ – 2025ರ ಮಾಹೆಯಲ್ಲಿ ಜರುಗಲಿರುವ ಬಿ.ಪಿ.ಇಡಿ, ಪದವಿಯ 1ನೇ ಮತ್ತು 3ನೇ ಸೆಮಿಸ್ಟರ್ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಬಗ್ಗೆ.

**ಉಲ್ಲೇಖ:** 1) ವಿಶ್ವವಿದ್ಯಾಲಯದ ಅಧಿಸೂಚನೆ ಸಂಖ್ಯೆ: ಕುವಿ:ಎಸಿ–3:ವೇಳಾಪಟ್ಟಿ: 3645:2024–25. ದಿನಾಂಕ: 16–12–2024.

2) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:13–02–2025

*****

**ಮಾರ್ಚ್/ಏಪ್ರಿಲ್ – 2025**ರ ಮಾಹೆಯಲ್ಲಿ ನಡೆಯಲಿರುವ **ಬಿ.ಪಿ.ಇಡಿ,** ಪದವಿಯ 1ನೇ ಮತ್ತು 3ನೇ ಸೆಮಿಸ್ಟರ್‌ನ (**Freshers**) ಹಾಗೂ 1ನೇ, 2ನೇ, 3ನೇ ಮತ್ತು 4ನೇ ಸೆಮಿಸ್ಟರ್‌ನ (**Repeaters**) ಲಿಖಿತ ಪರೀಕ್ಷೆಗಳು **ಮಾರ್ಚ್ – 2025**ರ ಮಾಹೆಯಲ್ಲಿ ಪ್ರಾರಂಭವಾಗುತ್ತವೆ. UUCMS ತಂತ್ರಾಂಶದಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾದ ವಿದ್ಯಾರ್ಥಿಗಳು ಆನ್‌ಲೈನ್ ಮುಖಾಂತರ ಪರೀಕ್ಷಾ ಅರ್ಜಿಗಳನ್ನು ಭರ್ತಿ ಮಾಡಿ ನಿಗದಿತ ದಿನಾಂಕದೊಳಗೆ ಶುಲ್ಕ ಸಂದಾಯ ಮಾಡಿ ವಿಭಾಗಾಧ್ಯಕ್ಷರಿಗೆ ಸಲ್ಲಿಸಲು ತಿಳಿಸಲಾಗಿದೆ. ಪುನರಾವರ್ತಿತ (**Repeaters**) ವಿದ್ಯಾರ್ಥಿಗಳಿಗೆ UUCMS ತಂತ್ರಾಂಶವು ಅನ್ವಯಿಸುವುದಿಲ್ಲ. ಆದರೆ, ಇಂತಹ ವಿದ್ಯಾರ್ಥಿಗಳು ಈ ಹಿಂದಿನ ಪದ್ಧತಿಯಂತೆ ಆನ್‌ಲೈನ್‌ನಲ್ಲಿ ಲಾಜಿಸಿಸ್ ಮೂಲಕ ಪರೀಕ್ಷಾ ಶುಲ್ಕವನ್ನು ಪಾವತಿಸುವುದು

ಕಡ್ಡಾಯವಾಗಿ ಆನ್‌ಲೈನ್‌ನಲ್ಲಿಯೇ ಅರ್ಜಿ ಸಲ್ಲಿಸುವುದು, ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ 6361532058/7022254993 ಸಂಪರ್ಕಿಸುವುದು. (ಕೊನೆಯ ದಿನಾಂಕದವರೆಗೆ ಅರ್ಜಿ ಸಲ್ಲಿಸಲು ಕಾಯದೇ ಮುಂಚಿತವಾಗಿಯೇ ಅನ್‌ಲೈನ್‌ನಲ್ಲಿ ಸಲ್ಲಿಸುವುದರಿಂದ ಅಂತ್ಯದಲ್ಲಿ ಉಂಟಾಗುವ ಸರ್ವರ್ ದಟ್ಟಣೆಯ ಅಡಚಣೆ ತಪ್ಪಿಸಬಹುದಾಗಿದೆ.)

**ಪರೀಕ್ಷೆಗಳ ವೇಳಾಪಟ್ಟಿಯನ್ನು ನಂತರ ಪ್ರಕಟಿಸಲಾಗುವುದು.**

| ಲಿಖಿತ / ಪ್ರಾಯೋಗಿಕ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕಗಳ ವಿವರ: | | |
|---|---|---|
| 1) | ಪ್ರಾಯೋಗಿಕ ಪರೀಕ್ಷೆಗಳನ್ನು – ರೆಗ್ಯುಲರ್ ವಿದ್ಯಾರ್ಥಿಗಳಿಗೆ ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ಪೂರ್ವದಲ್ಲಿಯೇ ಪ್ರಾರಂಭಿಸಿ ಮುಕ್ತಾಯಗೊಳಿಸುವುದು. | |
| 2) | ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ದಿನಾಂಕ:**07–03–2025**ರೊಳಗೆ ಕಡ್ಡಾಯವಾಗಿ ನಮೂದಿಸಬೇಕು | |
| 3) | ವಿದ್ಯಾರ್ಥಿಗಳ ಪ್ರವೇಶ ಪತ್ರದ ಮುದ್ರಣವನ್ನು ದಿನಾಂಕ: **06–03–2025** ರಿಂದ **08–03–2025**ರವರೆಗೆ ಮುದ್ರಿಸಿಕೊಳ್ಳಬೇಕು. | |
| **ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕಗಳು:** | | |
| 1) | ವಿಳಂಬ ಶುಲ್ಕವಿಲ್ಲದೆ | 18–02–2025 ರಿಂದ 22–02–2025 ರವರೆಗೆ |
| 2) | ವಿಳಂಬ ಶುಲ್ಕ ರೂ. 100=00ರಂತೆ | 23–02–2025 ರಿಂದ 24–02–2025 ರವರೆಗೆ |
| 3) | ವಿಳಂಬ ಶುಲ್ಕ ರೂ. 500=00ರಂತೆ | 25–02–2025 |

| ಶುಲ್ಕದ ವಿವರಗಳು | | |
|---|---|---|
| 1) | ಪೂರ್ಣ ಪರೀಕ್ಷೆಗೆ (Per Semester) | ರೂ. 1285/- |
| 2) | ಪ್ರತಿ ಪತ್ರಿಕೆಗೆ<br>(ಆ ಸೆಮಿಸ್ಟರ್‌ನ ಎಲ್ಲಾ ಪತ್ರಿಕೆಗಳಿಗೆ ರೂ.1285/-ಒಳಪಟ್ಟು) | ರೂ. 290/- |
| 3) | ಪ್ರಾಯೋಗಿಕ ಪರೀಕ್ಷೆಗೆ | ರೂ. 160/- |
| 4) | ಅಂಕಪಟ್ಟಿ ಶುಲ್ಕ | ರೂ. 290/- |

## *ವಿದ್ಯಾರ್ಥಿಗಳಿಗೆ ಸೂಚನೆ:*

1) ವಿದ್ಯಾರ್ಥಿಗಳು UUCMS ತಂತ್ರಾಂಶದ ಮೂಲಕ onlineನಲ್ಲಿ ಅರ್ಜಿ ಸಲ್ಲಿಸಲು ನೋಂದಣಿ ಸಂಖ್ಯೆ ನಮೂದಿಸಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿದ ನಂತರ ಶುಲ್ಕ ವಿವರಗಳುಳ್ಳ ಪರೀಕ್ಷಾ ಅರ್ಜಿಯನ್ನು ಮುದ್ರಿಸಿ ನೆಟ್ ಬ್ಯಾಂಕಿಂಗ್‌ನಲ್ಲಿ ಶುಲ್ಕ ಭರಿಸಿದ ನಂತರ ಪ್ರತಿಯನ್ನು ವಿಭಾಗಕ್ಕೆ ಸಲ್ಲಿಸಬೇಕು.
2) ಪರೀಕ್ಷಾ ಶುಲ್ಕವನ್ನು ಯಾವುದೇ ATM (Debit) Card / Credit Card / Net Banking / Paytm wallet ಮೂಲಕ ನೇರವಾಗಿ ವಿದ್ಯಾರ್ಥಿಯು ತಮ್ಮ ಬ್ಯಾಂಕ್ ಖಾತೆಯಿಂದ ಶುಲ್ಕ ಪಾವತಿಸಿ ಸಂಬಂಧಿಸಿದ ಚಲನ್ ಪ್ರತಿ ಮತ್ತು ದಾಖಲಾತಿಗಳನ್ನು ವಿಭಾಗಕ್ಕೆ ಸಲ್ಲಿಸಬೇಕು. ನಿಗದಿಪಡಿಸಿದ ದಿನಾಂಕದ ನಂತರ ಸಲ್ಲಿಸಿದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

**<u>ವಿಶೇಷ ಸೂಚನೆ</u>: ವಿದ್ಯಾರ್ಥಿಗಳು Internet Browsing centreನ ಮಾಲಿಕರ ಬ್ಯಾಂಕ್‌ಖಾತೆಯ ಮೂಲಕ ವಿಶ್ವವಿದ್ಯಾಲಯಕ್ಕೆ ಪರೀಕ್ಷಾ ಶುಲ್ಕ ಪಾವತಿಸಿದಲ್ಲಿ ಉಂಟಾಗುವ ತಾಂತ್ರಿಕ ತೊಂದರೆಗಳಿಗೆ ವಿದ್ಯಾರ್ಥಿಗಳೇ ಜವಾಬ್ದಾರರು.**

ಅ. ರೂ. 2.5 ಲಕ್ಷಗಳ ಆದಾಯಕ್ಕಿಂತ ಮೇಲ್ಪಟ್ಟ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು.

ಆ. **S.S.P. ಪೋರ್ಟಲ್ ಮುಖಾಂತರ ಸಮಾಜ ಕಲ್ಯಾಣ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾಥಿಗಳ ಬ್ಯಾಂಕ್ ಖಾತೆಗೆ ವಿದ್ಯಾರ್ಥಿ ವೇತನ ಜಮಾ ಮಾಡಲಾಗುತ್ತಿರುವುದರಿಂದ, ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು.** ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸದೇ ಇರುವ ವಿದ್ಯಾರ್ಥಿಗಳು / ವಿದ್ಯಾರ್ಥಿ ವೇತನ ಮಂಜೂರಾಗದ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು.

ಪ್ರವರ್ಗ-1ಕ್ಕೆ 2.5ಲಕ್ಷ ಹಾಗೂ ರೂ. 1 ಲಕ್ಷ ಅಥವಾ ಇದಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯವನ್ನು ಹೊಂದಿರುವ 2ಎ, 2ಬಿ, 3ಎ, 3ಬಿ ಹಾಗೂ ಇತರೆ Freshers ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಆದರೆ, ವಿದ್ಯಾರ್ಥಿಗಳ ಅರ್ಹತೆ ಮತ್ತು ಮೆರಿಟ್ ಆಧರಿಸಿ ಸರ್ಕಾರದ ಅನುದಾನದ ಲಭ್ಯತೆಗೆ ಒಳಪಟ್ಟು ಶುಲ್ಕ ಮರುಭರಿಕೆ ಮೊತ್ತವನ್ನು ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಇಲಾಖೆಯಿಂದ ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಎನ್.ಇ.ಎಫ್.ಟಿ ವ್ಯವಸ್ಥೆ ಮೂಲಕ ಜಮಾ ಮಾಡಲಾಗುವುದೆಂದು ಸರ್ಕಾರದ ಆದೇಶ ಸಂಖ್ಯೆ: ಸ.ಕ.ಇ./201/ಬಿ.ಎಂ.ಎಸ್/2011 ಬೆಂಗಳೂರು ದಿನಾಂಕ:23-06-2012ರಲ್ಲಿ ತಿಳಿಸಿರುತ್ತಾರೆ. ಶುಲ್ಕ ವಿನಾಯಿತಿ ಬಯಸುವ ಎಲ್ಲಾ ವಿದ್ಯಾರ್ಥಿಗಳು ಸಕ್ಷಮ ಅಧಿಕಾರಿಗಳಿಂದ ಪಡೆದ ಆದಾಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ವಿಭಾಗಕ್ಕೆ ಒಪ್ಪಿಸಬೇಕು.

3) ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳೂ ಕೂಡಾ ನಿಗದಿತ ಸಮಯದಲ್ಲಿ ಪರೀಕ್ಷಾ ಶುಲ್ಕ ಪಾವತಿಸಬೇಕು.
4) ಪರೀಕ್ಷೆಗೆ ವಿದ್ಯಾರ್ಥಿಗಳು ಪಾವತಿಸುವ ಶುಲ್ಕವನ್ನು ಯಾವುದೇ ಕಾರಣಕ್ಕಾಗಿ ಹಿಂದಿರುಗಿಸಲಾಗುವುದಿಲ್ಲ.

# ಕೋ-ಆರ್ಡಿನೇಟರ್‌ರವರಿಗೆ ಸೂಚನೆಗಳು

1) ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಿ ಸಲ್ಲಿಸಿದ ಚಲನ್‌ನ್ನು ಪರಿಶೀಲಿಸಿ ಕೊನೆ ದಿನಾಂಕದಿಂದ ಎರಡು ದಿನದೊಳಗಾಗಿ ಕೋ-ಆರ್ಡಿನೇಟರ್ ಮೇಲು ಸಹಿಯೊಂದಿಗೆ ಚಲನ್ ಪ್ರತಿ ಹಾಗೂ ಇತರೆ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ನಂತರ ಕಳುಹಿಸುವ ಅರ್ಜಿಗಳನ್ನು ಮಾನ್ಯ ಮಾಡುವುದಿಲ್ಲ.

2) **ಕುಲಸಚಿವ(ಆಡಳಿತ)/ಶೈಕ್ಷಣಿಕ ವಿಭಾಗದಿಂದ ಪ್ರವೇಶಾತಿ ಅನುಮೋದನೆಯಾಗದೇ ಹಾಗೂ ಕಡಿಮೆ ಹಾಜರಾತಿ ಇರುವ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿಗಳನ್ನು ಸಲ್ಲಿಸಲು ಅನರ್ಹರಾಗಿರುತ್ತಾರೆ.** ಪ್ರವೇಶಾವಕಾಶವು ಅಮಾನ್ಯವಾಗಿರುವ ಅಥವಾ ವಿಶ್ವವಿದ್ಯಾಲಯದಿಂದ ಪ್ರವೇಶವು ಅನುಮೋದಿತವಾಗಿಲ್ಲದ ಅಥವಾ ನಿರ್ದಿಷ್ಟ ಪಡಿಸಲಾದ ವಿದ್ಯಾರ್ಥಿಗಳ ಸಂಖ್ಯೆಗಿಂತ ಹೆಚ್ಚುವರಿಯಾಗಿ ವ್ಯಾಸಂಗಕ್ಕೆ ಪ್ರವೇಶ ಪಡೆದಿರುವ ಯಾವೊಬ್ಬ ವಿದ್ಯಾರ್ಥಿಯೂ, ವಿಶ್ವವಿದ್ಯಾಲಯವು ನಡೆಸುವ ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುವುದಿಲ್ಲ. ಅಲ್ಲದೆ ಆಯಾ ಕೋರ್ಸಿನ ನಿಯಮದ ಪ್ರಕಾರ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಲ್ಲದ ವಿದ್ಯಾರ್ಥಿಗಳು ಅರ್ಜಿಗಳನ್ನು ಸಲ್ಲಿಸುವಂತಿಲ್ಲ.

3) ಹಾಜರಾತಿ ಕೊರತೆ ಇರುವಂತಹ ಹಾಗೂ ಪ್ರವೇಶಾನುಮೋದನೆಯಾಗದೆ ವಿದ್ಯಾರ್ಥಿಗಳ ಪಟ್ಟಿಯನ್ನು ಪರೀಕ್ಷೆಗಳು ಆರಂಭವಾಗುವ 15 ದಿನ ಮುಂಚಿತವಾಗಿ ವಿಶ್ವವಿದ್ಯಾಲಯಕ್ಕೆ ತಪ್ಪದೇ ಸಲ್ಲಿಸುವುದು. ಒಂದು ವೇಳೆ ಹಾಜರಾತಿ ಕೊರತೆ ಹಾಗೂ ಪ್ರವೇಶಾನುಮೋದನೆಯಾಗದೇ ಇರುವ ವಿದ್ಯಾರ್ಥಿಗಳು ಮುಂದಿನ ಸೆಮಿಸ್ಟರ್‌ಗೆ ಅರ್ಹತೆಯಿಲ್ಲದೆ ಪರೀಕ್ಷಾ ಅರ್ಜಿ ಸಲ್ಲಿಸಿದ್ದಲ್ಲಿ/ಪರೀಕ್ಷೆ ತೆಗೆದುಕೊಂಡಲ್ಲಿ ಮುಂದಿನ ಎಲ್ಲಾ ತರಹದ ತೊಂದರೆಗಳಿಗೆ ವಿಭಾಗದ ಕೋ-ಆರ್ಡಿನೇಟರ್‌ರವರು ನೇರ ಜವಾಬ್ದಾರರಾಗಿರುತ್ತಾರೆ.

4) S.S.P. ಪೋರ್ಟಲ್ ಮುಖಾಂತರ ಸಮಾಜ ಕಲ್ಯಾಣ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾಥಿಗಳ ಬ್ಯಾಂಕ್ ಖಾತೆಗೆ ವಿದ್ಯಾರ್ಥಿ ವೇತನ ಜಮಾ ಮಾಡಲಾಗುತ್ತಿರುವುದರಿಂದ, ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು.

5) **ಪ್ರವರ್ಗ-1ಕ್ಕೆ 2.5ಲಕ್ಷ ಹಾಗೂ ರೂ. 1ಲಕ್ಷ ಅಥವಾ ಇದಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯವನ್ನು ಹೊಂದಿರುವ 2ಎ, 2ಬಿ, 3ಎ, 3ಬಿ ಹಾಗೂ ಇತರೆ Freshers ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಆದರೆ, ವಿದ್ಯಾರ್ಥಿಗಳ ಅರ್ಹತೆ ಮತ್ತು ಮೆರಿಟ್ ಆಧರಿಸಿ ಸರ್ಕಾರದ ಅನುದಾನದ ಲಭ್ಯತೆಗೆ ಒಳಪಟ್ಟು ಶುಲ್ಕ ಮರುಭರಿಕೆ ಮೊತ್ತವನ್ನು ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಎನ್.ಇ.ಎಫ್.ಟಿ ವ್ಯವಸ್ಥೆ ಮೂಲಕ ಜಮಾ ಮಾಡಲಾಗುವುದೆಂದು ಸರ್ಕಾರದ ಆದೇಶ ಸಂಖ್ಯೆ: ಸ.ಕ.ಇ./201/ಬಿ.ಎಂ.ಎಸ್.2011 ಬೆಂಗಳೂರು ದಿನಾಂಕ: 23-06-2012ರಲ್ಲಿ ತಿಳಿಸಿರುತ್ತಾರೆ.**

6) ಪ್ರಾಯೋಗಿಕ ಪರೀಕ್ಷೆಗೆ / ಸೈದ್ಧಾಂತಿಕ ಪರೀಕ್ಷೆ ನಡೆಸಲು ಬೇಕಾದ ಉತ್ತರ ಪತ್ರಿಕೆ ಮುದ್ರಿತ ನಮೂನೆಗಳು ಹಾಗೂ ಲೇಖನ ಸಾಮಾಗ್ರಿಗಳ ಬೇಡಿಕೆ ಪಟ್ಟಿಗಳನ್ನು ದಿನಾಂಕ:20-02-2025ರೊಳಗಾಗಿ ಉಪಕುಲಸಚಿವರು, ಲೆಕ್ಕ ಶಾಖೆ, ಪರೀಕ್ಷಾ ವಿಭಾಗ ಇವರಿಗೆ ತಲುಪಿಸಲು ಸೂಚಿಸಿದೆ. (ಹೆಚ್ಚಿನ ಮಾಹಿತಿಗೆ 6361529618 ಸಂಪರ್ಕಿಸಬಹುದು.)

7) ಪ್ರಶ್ನೆ ಪತ್ರಿಕೆಗಳ ಬೇಡಿಕೆ ಪಟ್ಟಿಯನ್ನು ದಿನಾಂಕ:20-02-2025ರೊಳಗೆ ಶ್ರೀ ಸಿದ್ಧಲಿಂಗ ಜಿ. ಪಾಟೀಲ್, ಸಹಾಯಕ ಕುಲಸಚಿವರು (ಪರೀಕ್ಷಾಂಗ), ದೂರವಾಣಿ ಸಂಖ್ಯೆ: 94818 77505, (ಪರೀಕ್ಷಾಂಗ), ರಹಸ್ಯ ವಿಭಾಗ, ಇವರಿಗೆ ಕಳುಹಿಸುವುದು.

8) ವಿಶ್ವವಿದ್ಯಾಲಯವು ಆಂತರಿಕ ಕಿರುಪರೀಕ್ಷೆಯ ಉತ್ತರ ಪತ್ರಿಕೆ (ಬ್ಲೂ ಬುಕ್)ಗಳನ್ನು ಹಿಂಪಡೆಯುವುದರಿಂದ ಸೈದ್ಧಾಂತಿಕ ಪರೀಕ್ಷೆ ಪ್ರಾರಂಭಕ್ಕೆ ಮುಂಚೆ ಆಂತರಿಕ ಅಂಕಗಳಿಗೆ ಸಂಬಂಧಿಸಿದಂತೆ ಯಾವುದೇ ತೊಂದರೆಗಳಿದ್ದಲ್ಲಿ ಅದನ್ನು ಬಗೆಹರಿಸಿಕೊಳ್ಳಬೇಕು. ತದನಂತರ ಬರುವಂತಹ ಆಂತರಿಕ ಅಂಕಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

9) ಆಂತರಿಕ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ತಮ್ಮ ವಿಭಾಗದಲ್ಲಿಯೇ ಆರು ತಿಂಗಳುಗಳ ಕಾಲ ಸಂರಕ್ಷಿಸಿಟ್ಟುಕೊಂಡು ನಂತರ ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡುವುದು.

10) ಯಾವುದೇ ವಿದ್ಯಾರ್ಥಿಯ ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ನಮೂದಿಸದೇ ಬಿಟ್ಟುಹೋದಲ್ಲಿ (Monitoring committeeಯಲ್ಲಿ ಪರಿಶೀಲಿಸಿ Freeze ಮಾಡಿದ ನಂತರ) ಯಾವುದೇ ಕಾರಣಕ್ಕೂ ಹಾರ್ಡ್‌ಕಾಪಿಯನ್ನು ನಂತರ ವಿಭಾಗದಿಂದ ಕಳುಹಿಸಿಕೊಟ್ಟಲ್ಲಿ ಅದನ್ನು ಪರಿಗಣಿಸಲಾಗುವುದಿಲ್ಲ ಅಂತಹ ಮನವಿಗಳನ್ನು ತಿರಸ್ಕರಿಸಲಾಗುವುದು.

ಕುಲಸಚಿವರು(ಪರೀಕ್ಷಾಂಗ)
ಕುವೆಂಪು ವಿಶ್ವವಿದ್ಯಾನಿಲಯ,
ಜ್ಞಾನಸಹ್ಯಾದ್ರಿ,
ಶಂಕರಘಟ್ಟ - 577 451.

*ಇವರಿಗೆ,*

1) ಕೋ-ಆರ್ಡಿನೇಟರ್, ಸ್ನಾತಕ ದೈಹಿಕ ಶಿಕ್ಷಣ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2) ಡಾ: ಸತ್ಯಪ್ರಕಾಶ್ ಎಂ. ಆರ್, ಪ್ರಾಧ್ಯಾಪಕರು ಮತ್ತು ನೋಡಲ್ ಅಧಿಕಾರಿಗಳು (UUCMS), ಪತ್ರಿಕೋದ್ಯಮ ಮತ್ತು ಸಂವಹನ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – **ಸೂಕ್ತ ಕ್ರಮಕ್ಕಾಗಿ.**
3) ಕಂಪ್ಯೂಟರ್ ಪ್ರೋಗ್ರಾಮರ್, ಪರೀಕ್ಷಾ ಕಂಪ್ಯೂಟರ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – **ಸೂಕ್ತ ಕ್ರಮಕ್ಕಾಗಿ.**

**ಪ್ರತಿಗಳು:**

1) ಗ್ರಂಥಪಾಲಕರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
2) ನಿರ್ದೇಶಕರು, ಪಿ.ಎಂ.ಇ ಮಂಡಳಿ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
3) ಸಂಚಾಲಕರು, ಎಸ್.ಸಿ/ಎಸ್.ಟಿ. ಸೆಲ್,/ ಓ.ಬಿ.ಸಿ. ಸೆಲ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
4) ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಉಪಕುಲಸಚಿವರು: ಸಹಾಯಕ ಕುಲಸಚಿವರು, ಪರೀಕ್ಷಾಂಗ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6) ತಾಂತ್ರಿಕ ಸಹಾಯಕರು, ಪರೀಕ್ಷಾ ಕಂಪ್ಯೂಟರ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ಆಪ್ತಶಾಖೆ:- ಮಾನ್ಯ ಕುಲಪತಿಗಳು, ಕುಲಸಚಿವ(ಆಡಳಿತ), ಕುಲಸಚಿವ(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ವಿಷಯ ನಿರ್ವಾಹಕರು, ಪರೀಕ್ಷಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) ಕಛೇರಿ ಪ್ರತಿ.